ಛೇರ್ಮನ್ :— ಒಟ್ಟು 21 ಶೂನ್ಯ ವೇಳೆಯ ಪ್ರಸ್ತಾವಗಳು ಇವೆ. ಮಾನ್ಯ ಸದಸ್ಯರುಗಳು ಸಂಕ್ಷಿಪ್ತವಾಗಿ ಮುಗಿಸಬೇಕು, ಸಹಕರಿಸಬೇಕು,

ಶ್ರೀ ಚಂದ್ರಶೇಖರ ಸದಾಶಿವ ನಾಯಕ್ :— ನನ್ನ ವಿಚಾರವು ಎಲ್ಲರಿಗೂ ಸಂಬಂಧಪಟ್ಟ ವಿಚಾರವಾಗಿದೆ. ಎಲ್ಲರಿಗೂ ಅವಕಾಶವನ್ನು ಕೊಟ್ಟಿದ್ದೀರಿ. ನನಗೂ ಸ್ವಲ್ಪ ಸಮಯ ಕೊಡಿ. ಜೀರೋ ಅವರ್‌ನಲ್ಲಿ 20 ನಿಮಿಷಗಳವರೆಗೂ ಮಾತನಾಡಿದ್ದು ನಮಗೆ ಗೊತ್ತಿದೆ. ನಾನು ಎಲ್ಲರಿಗೆ ಸಂಬಂಧಪಟ್ಟ ವಿಚಾರವನ್ನು ಪ್ರಸ್ತಾಪಿಸುವುದರ ಮೂಲಕ ಒಂದು ಪರಿಹಾರ ದೊರಕಲಿ ಎಂದು ಪ್ರಸ್ತಾಪಿಸುತ್ತಿದ್ದೇನೆ.

ಛೇರ್ಮನ್ :— ಇವೊತ್ತು ಶುಕ್ರವಾರ, ಇನ್ನೂ 21 ಜನರು ಪ್ರಸ್ತಾಪ ಮಾಡಬೇಕು. ಸಂಕ್ಷಿಪ್ತವಾಗಿ ವಿಚಾರಗಳನ್ನು ಮಂಡಿಸಿ, ತಾವುಗಳು ಅರ್ಥ ಮಾಡಿಕೊಂಡು ಸಹಕರಿಸಬೇಕು.

ಶ್ರೀ ಚಂದ್ರಶೇಖರ್ ಸದಾಶಿವ ನಾಯಕ್ :— ಇಲ್ಲಿ ಲೋಕೋಪಯೋಗಿ ಸಚಿವರೂ ಕೂಡ ಇಲ್ಲ. ಈಗ ಬಾಕಿ ಬಿಲ್ ಬಗ್ಗೆ ಏನು ಮಾಡುತ್ತೀರಿ? ಜೂನ್ ತಿಂಗಳಲ್ಲಿ ಡಾಂಬರ್ ಕೊಟ್ಟರೆ ಅದರ ಉಪಯೋಗವನ್ನು ಹೇಗೆ ಮಾಡುವುದು? ನಬಾರ್ಡ್‌ನವರು ಮರು ಡಾಂಬರೀಕರಣ ಮಾಡುವುದಿಲ್ಲ. ಸರಕಾರದಿಂದ ರಸ್ತೆಗಳಿಗೆ ಮಣ್ಣು ಹಾಕಿಸಲು ದಿನಗೂಲಿ ನೌಕರರು ಇಲ್ಲ, ಇದಕ್ಕೆ ಪರಿಹಾರ ಏನು? ಈ ಪ್ರಸ್ತಾವವನ್ನು ಸೋಮವಾರ ಬೇಕಾದರೂ ತೆಗೆದುಕೊಳ್ಳಿ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಹಾಗು ಪಂಚಾಯತ್ ರಾಜ್ ಸಚಿವರು) :— ಮಾನ್ಯ ಅಧ್ಯಕ್ಷರೆ, ಮಾನ್ಯ ಲೋಕೋಪಯೋಗಿ ಸಚಿವರಿಂದ ಉತ್ತರವನ್ನು ತರಿಸಿಕೊಡುತ್ತೇವೆ. ಸೋಮವಾರದಂದು ಅವರಿಗೆ ಪ್ರಸ್ತಾಪ ಮಾಡಲು ಅವಕಾಶವನ್ನು ಕೊಡಿ.

(ಉ) ರಾಜ್ಯದಲ್ಲಿ ಕುಡಿಯುವ ನೀರಿನ ಯೋಜನೆಗಳು.

ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್) :— ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಕುಡಿಯುವ ನೀರಿಗೋಸ್ಕರ ಸರ್ಕಾರ ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದೆ. ಕೇಂದ್ರದಿಂದ, ವಿಶ್ವಬ್ಯಾಂಕಿನಿಂದಲೂ, ಕಿರುನೀರು ಸರಬರಾಜು ಇರಬಹುದು, ನಲ್ಲಿ ನೀರಿನ ಯೋಜನೆ ಇರಬಹುದು ಸಾಕಷ್ಟು ಹಣ ಬರುತ್ತಿದೆ. ಸರ್ಕಾರವೂ ರಾಜ್ಯದ ಎಲ್ಲಾ ಭಾಗದಲ್ಲೂ, ಈ ಯೋಜನೆಗಳನ್ನು ಕೈಗೆತ್ತಿಕೊಂಡಿರುವುದು ನಮಗೆಲ್ಲಾ ಗೊತ್ತಿದೆ. ದುರಾದೃಷ್ಟ ಇವತ್ತು ಈ ಯೋಜನೆಗಳ್ಯಾವುವೂ ಕಾರ್ಯಗತವಾಗದಂತಾಗಿವೆ ಕಾರಣ ಇಷ್ಟೆ, ಕೇಬಿಯವರು ಯೋಜನೆಗಳಿಗೆ ಸಂಪರ್ಕ ಕಲ್ಪಿಸುತ್ತಿಲ್ಲ. ಅಂದರೆ ಅನಗತ್ಯವಾಗಿ ವಿಳಂಬ ಮಾಡುತ್ತಿದ್ದಾರೆ. ಈ ಯೋಜನೆಗಳಿಗೆ ಬೇಕಾದ ಸಾಮಗ್ರಿಗಳು ಯಾವ ಕಚೇರಿಯಲ್ಲೂ ಸಿಗುವುದಿಲ್ಲ. ಕಚೇರಿಯಲ್ಲಿ ಕೇಳಿದರೆ ಕುಡಿಯುವ ನೀರಿನ ಯೋಜನೆಗಳಿಗೆ ಈಗಾಗಲೇ

ಸಾಕಷ್ಟು ಸಾಮಗ್ರಿ ಇಶ್ಯೂ ಮಾಡಿದ್ದೇವೆ ಅನ್ನುತ್ತಾರೆ. ಅಂದರೆ ಕಂಟ್ರಾಕ್ಟರ್‌ಗಳಿಗೆ ಇಶ್ಯೂ ಮಾಡಿರುತ್ತಾರೆ. ಅವರು ಯಾರೋ ರೈತರಿಗೆ ಮಾರಿಬಿಟ್ಟು ಪರಿಸ್ಥಿತಿ ಇಡೀ ರಾಜ್ಯದಲ್ಲಿ ಯಾವ ಯೋಜನೆಗಳೂ ಜನರಿಗೆ ತಲುಪದಂತಹ ಮಟ್ಟಕ್ಕೆ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಬಗ್ಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಪ್ರಗತಿ ಪರಿಶೀಲನಾ ಸಭೆಗೆ ತುಮಕೂರಿಗೆ ಬಂದ ಸಮಯದಲ್ಲಿ ಜಿಲ್ಲೆಯ ಎಲ್ಲಾ ಶಾಸಕರೂ ಅವರ ಗಮನಕ್ಕೆ ತಂದಿದ್ದೇವೆ. ಆದರೆ ಕಾರ್ಯವೈಖರಿಯಲ್ಲಿ ಯಾವುದೇ ಬದಲಾವಣೆ ಇಲ್ಲಿಯವರೆಗೆ ಆಗಿಲ್ಲ. ಕೇಳಿದರೆ ಜಿಲ್ಲಾಪಂಚಾಯ್ತಿ ಇಂಜಿನಿಯರಿಂಗ್ ವಿಭಾಗದ್ದು ತಪ್ಪಿದೆ, ನಾವೇನು ಮಾಡುವುದಕ್ಕಾಗುವುದಿಲ್ಲ ಅನ್ನುತ್ತಾರೆ. ಅವರನ್ನು ಕೇಳಿದರೆ ಕೆ.ಇ.ಬಿ.ಯವರು ಸಾಮಗ್ರಿ ಕೊಡುತ್ತಿಲ್ಲ ಎಂದು ಇವರನ್ನು ದೂರುತ್ತಾರೆ. ಇದರಿಂದಾಗಿ ರಾಜ್ಯದಲ್ಲಿ ಕುಡಿಯುವ ನೀರಿನ ಯೋಜನೆಗಳು ಅನುಷ್ಠಾನ ಆಗುತ್ತಿಲ್ಲ. ಆದ್ದರಿಂದ ರಾಜ್ಯದಲ್ಲಿ ಕುಡಿಯುವ ನೀರಿನ ಯೋಜನೆಗಳು ಅನುಷ್ಠಾನ ಆಗುತ್ತಿಲ್ಲ. ಆದ್ದರಿಂದ ನಾನು ಸಚಿವರನ್ನು ಕೇಳಿಕೊಳ್ಳುವುದೇನೆಂದರೆ ರಾಜ್ಯದಲ್ಲಿ ಕುಡಿಯುವ ನೀರಿನ ಯೋಜನೆಗಳು ಎಲ್ಲೆಲ್ಲಿ ವಿದ್ಯುತ್‌ಗಾಗಿ ಕಾದಿವೆ, ಅವುಗಳಿಗೆ ವಿದ್ಯುತ್ ಪೂರೈಕೆಗಾಗಿ ತಕ್ಷಣ ವಿಶೇಷ ಆದೇಶವನ್ನು ಅಂದರೆ 15-20 ದಿವಸದಲ್ಲಿ ಪೂರೈಸುವಂತೆ ಮಾಡುವ ಬಗ್ಗೆ ಸರ್ಕಾರ ಏನಾದರೂ ಚಿಂತನೆ ಮಾಡಿದೆಯಾ?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಹಾಗು ಪಂಚಾಯತ್ ರಾಜ್ ಸಚಿವರು) :— ರಾಜ್ಯದಲ್ಲಿ ಈಗಾಗಲೇ 37041 ನೀರು ಸರಬರಾಜು ಯೋಜನೆಗಳಿಗೆ ವಿದ್ಯುತ್ ಸಂಪರ್ಕ ಒದಗಿಸಲಾಗಿದೆ. 1998-99 ರಲ್ಲಿ 3474 ನೀರು ಸರಬರಾಜು ಯೋಜನೆಗಳಿಗೆ ವಿದ್ಯುತ್ ಸರಬರಾಜು ಕಲ್ಪಿಸಲಾಗಿದೆ ಇನ್ನೂ 2815 ಯೋಜನೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಬೇಕಾಗಿದೆ. ವಿಶ್ವಬ್ಯಾಂಕ್ ನೆರವಿನಿಂದ ತತ್ಕಾಲ್ ಯೋಜನೆಯಲ್ಲಿ ಸುಮಾರು 238 ಯೋಜನೆಗಳಿಗೆ ಹಣ ದೊರೆತಿದ್ದು ಈ ವರ್ಷ 860 ನೀರು ಸರಬರಾಜು ಯೋಜನೆಗಳ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದೆ. ಉಳಿದ 2815 ಯೋಜನೆಗಳಿಗೆ ಈ ವರ್ಷ ವಿದ್ಯುತ್ ಸಂಪರ್ಕ ಕಲ್ಪಿಸಲಾಗುವುದು. ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿರುವುದು ಬಹಳ ಗುರುತರವಾದ ವಿಷಯ. ಕುಡಿಯುವ ನೀರಿಗೆ ಯಾವುದೇ ಸಂದರ್ಭದಲ್ಲಿ ಹಣದ ಅಥವಾ ಸಾಮಗ್ರಿಗಳ ಕೊರತೆಯಾಗಬಾರದು. ಈ ಬಗ್ಗೆ ಕೆಇಬಿಗೆ ನಮ್ಮ ಸರ್ಕಾರದಿಂದಆದೇಶ ಕೊಟ್ಟಿದ್ದೇವೆ. ಇದರ ಜ್ಞೇಷ್ಠತೆಯನ್ನು ತಾವು ಪರಿಗಣಿಸಿ ಬೇರೆ ಎಲ್ಲಾ ಪ್ರಕರಣಗಳಿಗೆ ಆದ್ಯತೆ ತಡೆಹಿಡಿದು ಈ ಕುಡಿಯುವ ನೀರಿನ ಯೋಜನೆಗಳಿಗೆ ಆದ್ಯತೆ ಕೊಡಬಹುದು. ಅದರಂತೆ ನಿಮ್ಮ ತುಮಕೂರು ಕಚೇರಿಗೂ ಪರಿವೀಕ್ಷಣೆ ಆದಮೇಲೂ ನಾವು ಪತ್ರ ಬರೆದಿದ್ದೇವೆ. ನಿಮ್ಮಲ್ಲಿ ಇನ್ನೂ ಆಟೆಂಡ್ ಮಾಡಬೇಕಾದವು ಇವೆ. ಉಪಕರಣಗಳ ಕೊರತೆ ಆಗಿರುವುದರಿಂದ ಸ್ವಲ್ಪ ತೊಂದರೆಯಾಗಿರಬಹುದು. ತಮ್ಮ ಸಲಹೆ ಪ್ರಕಾರ ಪುನರಪಿ ಆದೇಶ ಕಳುಹಿಸಿಕೊಡುತ್ತೇನೆ.

ಶ್ರೀ ರಮೇಶ್ ಕುಮಾರ್ (ಮಾನ್ಯ ಅಧ್ಯಕ್ಷರು) ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)